ಕಾಮಗಾರಿಯ ಆವಾರದಲ್ಲೇ ಇರುವ ಜನರಿಗೆ ಯಾವುದೇ ರೀತಿಯ ಸೌಲಭ್ಯದ ಕೊರತೆಯಾಗದಂತೆ ಕಂಪನಿ ನೋಡಿಕೊಳ್ಳುತ್ತಿತ್ತು. ಹವಾನಿಯಂತ್ರಿತ ಕೋಣೆಗಳು, ಗುಣಮಟ್ಟದ ಆಹಾರ, ವಾರಾಂತ್ಯದಲ್ಲಿ ಮದ್ಯದ ಸರಬರಾಜು, ಸಿನಿಮಾ ಹಾಲು, ಸ್ವಿಮ್ಮಿಂಗ್ ಪೂಲು, ಜಿಮ್ಮು ಇತ್ಯಾದಿಗಳನ್ನೊಳಗೊಂಡ ಅಲ್ಲಿಯ ವ್ಯವಸ್ಥೆ ಯಾವುದೇ ಫೈವ್‌ಸ್ಟಾರ್ ಹೋಟೆಲಿಗೂ ಕಡಿಮೆಯಿರಲಿಲ್ಲ. ಆದರೆ ಅಲ್ಲಿಂದ ಹೊರಹೋಗುವಂತಿರಲಿಲ್ಲ ಅಷ್ಟೇ. ಕಸಬಾಕ್ಕೆ ಬರಬೇಕೆಂದರೂ, ಅಲ್ಲಿಗೆ ಹೋಗಬೇಕಾದ ಅನಿವಾರ್ಯತೆಯನ್ನು ಮೇಲಧಿಕಾರಿಗೆ ಮನವರಿಕೆ ಮಾಡಿಕೊಟ್ಟು ಅನುಮತಿ ಪಡೆಯಬೇಕಿತ್ತು; ತಿಳಿಸಿದ ಹೊತ್ತಿಗೇ ವಾಪಸ್ಸಾಗಬೇಕಿತ್ತು.

ಇಷ್ಟೆಲ್ಲಾ ಕಟ್ಟುನಿಟ್ಟಾದ ನಿಯಮಗಳಿಗೆ ಕಾರಣ ಕಸಬಾದ ಅತೀ ಸೂಕ್ಷ್ಮ ರಾಜಕೀಯ ಸ್ಥಿತಿ. ಕಸಬಾದ ಮೂಲ ನಿವಾಸಿಗಳು ತಮ್ಮ ಪ್ರದೇಶ ದುಬಾಯಿಗೇ ಸೇರಬೇಕೆಂದು ಬಯಸುತ್ತಿದ್ದರು. ಅದಕ್ಕೆ ಅವರದೇ ಆದ ಹಲವಾರು ಕಾರಣಗಳಿದ್ದವು. ಓಮಾನಿನ ಅಧಿಪತ್ಯದಲ್ಲಿರಲು ಅತೀವ ಅಸಮಾಧಾನವಿತ್ತು ಅವರಲ್ಲಿ. ಈ ಕುರಿತು ಬಹಿರಂಗವಾಗಿಯೂ ಕಸಬಾದ ಜನ ಪ್ರತಿಭಟನೆಗಿಳಿದಿದ್ದರು. ಆದರೆ ಓಮಾನ್ ಸರಕಾರ ಅದಕ್ಕೆ ಸೊಪ್ಪುಹಾಕುತ್ತಿರಲಿಲ್ಲ. ಪ್ರತಿಭಟನಾಕಾರರನ್ನು ಜೈಲಿಗಟ್ಟುತ್ತಲ್ಲದೇ ಅನೇಕರನ್ನು ನೇಣಿಗೂ ಹಾಕಿ ಅಲ್ಲಿಯವರ ಸದ್ದಡಗಿಸಿತ್ತು. ಹೀಗಾಗಿ ಒಂದು ರೀತಿಯ ಬೂದಿ ಮುಚ್ಚಿದ ಕೆಂಡದಂತಿತ್ತು ಕಸಬಾದ ಪರಿಸ್ಥಿತಿ.

ಕಸಬಾದ ಬೆಳವಣಿಗೆಗಳ ಮೇಲೆ ನಿಗಾ ಇಡಲು ಅನೇಕ ಗೂಢಚಾರರನ್ನು ಬಿಟ್ಟಿದೆ ಸರಕಾರ ಎನ್ನುವ ಮಾತು ಚಾಲ್ತಿಯಲ್ಲಿತ್ತು. ಯಾರಾದರೂ ಬಹಿರಂಗವಾಗಿ ಈ ಕುರಿತು ಚರ್ಚಿಸಿದರೆ ಅವರನ್ನು ಜೈಲಿಗಟ್ಟಲಾಗುತ್ತದೆ ಅಂದೂ ಅನ್ನಲಾಗುತ್ತಿತ್ತು. ಇದಕ್ಕೆ ಪೂರಕವೆಂಬಂತೆ ರಾತ್ರೋರಾತ್ರಿ ಜನ ಕಾಣೆಯಾದ ಸುದ್ದಿಗಳೂ ಸಾಕಷ್ಟಿದ್ದವು. ಹೀಗಾಗಿ ಯಾರೂ ಈ ವಿಷಯದ ಬಗ್ಗೆ ಮಾತನಾಡಲು ಹೋಗುತ್ತಿರಲಿಲ್ಲ. ಹೊರದೇಶದಿಂದ ಬಂದವರಂತೂ ಅದರ ಚಕಾರವನ್ನೂ ಎತ್ತುತ್ತಿರಲಿಲ್ಲ. ಅಲ್ಲಿ ನಿರ್ಮಾಣವಾಗುತ್ತಿರುವ ಬಂದರು ಕೂಡ ಓಮಾನ್ ಸರಕಾರ ಕಸಬಾದ ಮೇಲೆ ತನ್ನ ಹಿಡಿತ ಬಲಗೊಳಿಸಿಕೊಳ್ಳಲು ಮಾಡುತ್ತಿರುವ ಹುನ್ನಾರ ಎಂಬ ಭಾವನೆ ಅಲ್ಲಿಯ ಜನರಲ್ಲಿತ್ತು.

★★★

ಕಸಬಾ ಸಮುದ್ರದ ಆಚೆಯ ದಂಡೆ ಇರಾನ್ ದೇಶದ್ದು. ಬಂದರು ನಿರ್ಮಾಣ ಕೆಲಸ ನಡೆಯುವ ಸ್ಥಳದಿಂದ ಶುಭ್ರ ಆಕಾಶವಿರುವ ದಿನ ನೋಡಿದರೆ, ಸಾಗರದ ಆಚೆ ಇರುವ ಇರಾನಿನ ಬಂದರ್–ಎ–ಅಬ್ಬಾಸ್ ನಗರ ಕಾಣುತ್ತದೆ ಎಂಬುದು ಅಲ್ಲಿಯ ಪ್ರತೀತಿ. ಕಂಡಿದ್ದೇನೆ ಎನ್ನುವವರು ಹಲವರು, ಇಲ್ಲ ಅದೆಲ್ಲ ಕೇವಲ ಭ್ರಮೆ ಎನ್ನುವವರು ಇನ್ನಷ್ಟು. ಆದರೆ ಕೆಲಸದ ನಡುವೆ ಆಗಾಗ ಸಮುದ್ರದತ್ತ ಕಣ್ಣಗಲಿಸಿ ಬಂದರ್–ಎ–ಅಬ್ಬಾಸ್ ಕಾಣಿಸುತ್ತದೆಯೋ ಎಂದು ನೋಡದವರಿಲ್ಲ. ಕೂಲಿ ಕಾರ್ಮಿಕರಿಂದ ಹಿಡಿದು ದೊಡ್ಡ ಅಧಿಕಾರಿಗಳೂ ಅದು ಕಂಡೀತೋ ಎಂದು ಸಾಗರದತ್ತ ಒಮ್ಮೆ ಕಣ್ಣು ನೆಡುವವರೇ. ಚಂದ್ರಕಾಂತನೂ ಅದಕ್ಕೆ ಹೊರತಲ್ಲ. 'ಕಂದು ಕಂದಾಗಿ ಕಾಣುತ್ತಿರುವುದು ಅಲ್ಲಿಯ ಕಟ್ಟಡ, ಮೊನ್ನೆ ಕಂಡ ಬಿಳಿ ಬಣ್ಣದ ವಸ್ತು ಅಲ್ಲಿಯ ಬಂದರಿನಲ್ಲಿ ನಿಂತ ಹಡಗಾಗಿತ್ತು... ಇಂದು ಅದಿಲ್ಲ, ಗಮನಿಸಿದ್ಯಾ?' ಎನ್ನುತ್ತ ಕೆಲವರು ಸಮರ್ಥಿಸುವುದು; 'ಆ ಊರು ಹತ್ತಿರದಲ್ಲಿರುವುದೇನೋ ನಿಜ ಆದರೆ ಬರಿಗಣ್ಣಿಗೆ ಕಾಣಲು ಸಾಧ್ಯವೇ ಇಲ್ಲ... ನೋ ಛಾನ್ಸ್' ಎಂದು ಇನ್ನಷ್ಟು ಜನ ವಾದಿಸುವುದು ಮಾಮೂಲಿಯ ವಿಷಯವಾಗಿತ್ತು.

ಇವೆಲ್ಲವುಗಳ ಜೊತೆಗೆ ಬಂದರ್–ಎ–ಅಬ್ಬಾಸ್ ನಗರದ ಬಗ್ಗೆ ಹಲವಾರು ರೋಚಕ